ಆದರೆ ಕಳೆದ ವರ್ಷ ನಡೆದ 500 ರೂ. ಮತ್ತು 1000 ರೂಪಾಯಿಗಳ ನೋಟ್‌ಗಳ ನಿಷೇಧದ ಬಳಿಕ ಭಾರತೀಯ ಮಾರುಕಟ್ಟೆಯಲ್ಲಿ ನಗದು ಕೊರತೆ ಉಂಟು ಮಾಡಿದ ತಲ್ಲಣಗಳನ್ನು ಜನಸಾಮಾನ್ಯರು ಅರಗಿಸಿಕೊಳ್ಳುವುದಕ್ಕೆ ಮುನ್ನವೇ ಜಿಎಸ್‌ಟಿ ಜಾರಿಯಾಗಿದ್ದು ವ್ಯಾಪಾರಿ ವಲಯದಲ್ಲಿ ಇನ್ನಷ್ಟು ಗೊಂದಲ ಮತ್ತು ಆತಂಕಗಳನ್ನು ಉಂಟು ಮಾಡಿದ್ದು ಸುಳ್ಳಲ್ಲ. ಈ ಮಧ್ಯೆ ಏಪ್ರಿಲ್–ಜೂನ್ ತ್ರೈಮಾಸಿಕ ಅವಧಿಯಲ್ಲಿ ಒಟ್ಟು ದೇಶೀಯ ಉತ್ಪಾದನೆ (ಜಿಡಿಪಿ) ಮೂರು ವರ್ಷದಲ್ಲೇ ಅತ್ಯಂತ ಕನಿಷ್ಠ ಪ್ರಮಾಣಕ್ಕೆ ಇಳಿದದ್ದು ಆರ್ಥಿಕ ಹಿಂಜರಿತದ ಭೀತಿಯನ್ನೂ ಹುಟ್ಟಿಸಿತು. ಆದರೆ ವರ್ಷದ ಕೊನೆಗೆ ಆರ್ಥಿಕತೆಯಲ್ಲಿ ಸ್ವಲ್ಪ ಮಟ್ಟಿನ ಚೇತರಿಕೆ ಕಂಡುಬಂದಿದೆ.

ಉದ್ಯಮಗಳ ಸಂಘಟನೆ ನಾಸ್ಕಾಮ್ ನೀಡಿದ ವರದಿಯ ಪ್ರಕಾರ, ದೇಶದ ಆರ್ಥಿಕತೆಯಲ್ಲಿ ಉಂಟಾಗಿರುವ ಹಿಂಜರಿಕೆ ಇನ್ನಷ್ಟು ದೀರ್ಘಕಾಲ ಮುಂದುವರಿಯುವ ನಿರೀಕ್ಷೆ ಇದೆ. ಈ ವರ್ಷ ನವೋದ್ಯಮಗಳ ಪಾಲಿಗೆ ಸ್ವಲ್ಪ ಕಹಿ ವರ್ಷವೆಂದೇ ಹೇಳಬೇಕು. 2016ರಲ್ಲಿ ನವೋದ್ಯಮಗಳ ದೊಡ್ಡ ಹಿಂಡೇ ಮಾರುಕಟ್ಟೆಗೆ ನುಗ್ಗಿತ್ತು. ನವೋದ್ಯಮದಲ್ಲಿ ಬಂಡವಾಳ ಹೂಡಿಕೆಗೆ ಹೊಸ ಉಪಕ್ರಮಗಳನ್ನು ಸರ್ಕಾರ ಕೈಗೊಂಡಿತ್ತು. ಆದರೆ 2017ರಲ್ಲಿ ಭಾರತದ ಅತ್ಯಂತ ಪ್ರಮುಖ ಎನ್ನಲಾದ ಒಟ್ಟು 17 ನವೋದ್ಯಮಗಳು (ಸ್ಟಾರ್ಟಪ್) ಬಾಗಿಲು ಮುಚ್ಚಿರುವುದು ಆತಂಕ ಹುಟ್ಟಿಸಿದ ಸಂಗತಿ. ಅದರಲ್ಲೂ ಹೀಗೆ ನವೋದ್ಯಮಗಳ ಬಂದ್ ಆಗಲು ಬಂಡವಾಳದ ಕೊರತೆ ಕಾರಣವಲ್ಲ; ಬದಲಾಗಿ ಮಾರುಕಟ್ಟೆಯ ಕುಸಿತ ಕಾರಣ ಎನ್ನುವುದು ಆತಂಕವನ್ನು ಇನ್ನಷ್ಟು ಹೆಚ್ಚಾಗಿಸಿರುವುದು ಸುಳ್ಳಲ್ಲ.

ಎಸ್‌ಬಿಐ ನಲ್ಲಿ  ಮೈಸೂರು ಬ್ಯಾಂಕ್ ಸಹಿತ ಹಲವು ರಾಜ್ಯ ಬ್ಯಾಂಕ್‌ಗಳು ವಿಲೀನಗೊಂಡದ್ದು ಬ್ಯಾಂಕಿಂಗ್ ಕ್ಷೇತ್ರದ ಮಹತ್ವದ ಸುದ್ದಿ. ಈ ಮಧ್ಯೆ ಕಳೆದ ಎರಡು ವರ್ಷಗಳಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಒಟ್ಟು 2.11 ಲಕ್ಷ ಕೋಟಿ ಬಂಡವಾಳ ಹರಿದುಬಂದಿದೆ ಎಂದು ಅರ್ಥಸಚಿವರು ಪ್ರಕಟಿಸಿದ್ದಾರೆ.

## 6 ವರ್ಷದ ಮದುವೆ

ಭಾರತದ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಮತ್ತು ಬಾಲಿವುಡ್ ನಟಿ ಅನೂಷ್ಕಾ ಶರ್ಮಾ ಅವರ ಮದುವೆ ಈ ವರ್ಷದ ಅತ್ಯಂತ ಪ್ರಚಾರದ ಮದುವೆ ಎನ್ನಿಸಿಕೊಂಡಿತು. ಈ ಜೋಡಿ ಕಳೆದ 2–3 ವರ್ಷಗಳಿಂದ ಒಟ್ಟಿಗೇ ಓಡಾಡುತ್ತಿದ್ದು, ಮದುವೆ ಯಾವಾಗ ಎನ್ನುವ ಕುತೂಹಲವಷ್ಟೇ ಉಳಿದುಕೊಂಡಇತ್ತು. ಡಿಸೆಂಬರ್ 11ರಂದು ಇಬ್ಬರೂ ದೂರದ ಇಟಲಿಯಲ್ಲಿ ಮದುವೆಯಾದ ಸುದ್ದಿ ಭಾರತದಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿತು. ಕೆಲವೇ ಮಂದಿ ಆಪ್ತೇಷ್ಟರು ಈ ಮದುವೆಯಲ್ಲಿ ಪಾಲ್ಗೊಂಡಿದ್ದರು.



ಹೊಸ ಜೋಡಿ 'ವಿರುಷ್ಕಾ'

10 ದಿನಗಳ ಬಳಿಕ ಭಾರತಕ್ಕೆ ಬಂದಿಳಿದ ಈ ಜೋಡಿ ನವದೆಹಲಿಯಲ್ಲಿ ತಾಜ್ ಡಿಪ್ಲೊಮ್ಯಾಟಿಕ್ ಎನ್‌ಕ್ಲೇವ್‌ನಲ್ಲಿ ನೀಡಿದ ಭರ್ಜರಿ ಪಾರ್ಟಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರೂ ಭಾಗವಹಿಸಿದ್ದು ವಿಶೇಷವಾಗಿತ್ತು. ಪಂಜಾಬಿ ಗಾಯಕ ಗುರುದಾಸ್ ಮಾನ್ ಸಂಗೀತಕ್ಕೆ ನವದಂಪತಿ ಹೆಜ್ಜೆ ಹಾಕಿದ್ದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿ. ಕ್ರಿಸ್ಮಸ್ ಹಬ್ಬದ ಮರುದಿನ ಮುಂಬೈಯಲ್ಲಿ ನಡೆದ ಇನ್ನೊಂದು ಪಾರ್ಟಿಯಲ್ಲಿ ಚಿತ್ರರಂಗದ ಅತಿರಥ ಮಹಾರಥರು ಪಾಲ್ಗೊಂಡಿದ್ದರು.

ಮದುವೆಯ ಮೂಲಕ ಸುದ್ದಿ ಮಾಡುವುದಕ್ಕಿಂತ ಒಂದು ವಾರ ಮುಂಚೆ ವಿರಾಟ್ ಕೊಹ್ಲಿ ತನ್ನ ಅಪೂರ್ವ ಬ್ಯಾಟಿಂಗ್ ಮೂಲಕ ಹಲವು ದಾಖಲೆಗಳನ್ನು ಸಾಧಿಸಿದ್ದು, ಈ ವರ್ಷವನ್ನು 'ಕೊಹ್ಲಿಯ ವರ್ಷ' ಎಂದೇ ಹೇಳಬಹುದು. ದೆಹಲಿ ಟೆಸ್ಟ್‌ನಲ್ಲಿ ಶ್ರೀಲಂಕಾ ವಿರುದ್ಧ 243 ರನ್‌ಗಳನ್ನು ಹೊಡೆದು ಅವರು ತನ್ನ ಜೀವನಶ್ರೇಷ್ಠ ಇನಿಂಗ್ಸ್ ಅನ್ನು ದಾಖಲಿಸಿದರು. ಟೆಸ್ಟ್ ನಾಯಕನಾಗಿ ಅತ್ಯಧಿಕ ಡಬಲ್ ಸೆಂಚುರಿಗಳನ್ನು ಹೊಡೆದ ಬ್ರಿಯಾನ್ ಲಾರಾ ಅವರ ದಾಖಲೆಯನ್ನು ಹಿಂದಿಕ್ಕಿದ ಕೊಹ್ಲಿ ತನ್ನ ಆರನೇ ದ್ವಿಶತಕವನ್ನು ದಾಖಲಿಸಿದರು. ಡಾನ್ ಬ್ರಾಡ್ಮನ್ ಅವರು ಒಟ್ಟು 12 ಡಬಲ್ ಸೆಂಚುರಿಗಳನ್ನು ದಾಖಲಿಸಿದ್ದರೂ. ಅದರಲ್ಲಿ ನಾಲ್ಕು ಡಬಲ್ ಸೆಂಚುರಿಗಳು ತಂಡದ ನಾಯಕನಾಗಿ ಗಳಿಸಿದ್ದು. 2017ರಲ್ಲಿ ಕೊಹ್ಲಿ ಟೆಸ್ಟ್‌ನಲ್ಲಿ ಒಟ್ಟು 1000 ರನ್‌ಗಳನ್ನು ಗಳಿಸಿದ್ದು, ಈ ವರ್ಷ ಇಂತಹ ಸಾಧನೆ ಮಾಡಿದ ವಿಶ್ವದ ನಾಲ್ಕನೇ ಆಟಗಾರ ಎಂಬ ಹೆಸರು ಗಳಿಸಿದರು. ಸತತ ಎರಡು ವರ್ಷಗಳಲ್ಲಿ ತಲಾ 1000 ರನ್ ಗಳಿಸಿದ ಮೂರನೇ ಭಾರತೀಯ ಆಟಗಾರ (ಗಾವಸ್ಕರ್ ಮತ್ತು ತೆಂಡೂಲ್ಕರ್ ಬಳಿಕ) ಎನ್ನುವ ಕೀರ್ತಿಯೂ ಅವರದ್ದಾಗಿದೆ.




ನಮ್ಮ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಿದ ಶ್ರೀ ಬಿ.ಹೆಚ್.ಆಚಾರ್ಯ ಗುರೂಜಿ ಅವರಿಗೆ ನಮ್ಮ ಅಭಿನಂದನೆಗಳು

ತುಂಬಾ ಖುಷಿ ಹಾಗೂ ಸಂತೋಷ ಆಗುತ್ತೆ ಶ್ರೀಶ್ರೀ ಆಚಾರ್ಯ ಗುರೂಜಿಯವರ ಬಗ್ಗೆ ಮಾತನಾಡೋಕೆ ಯಾಕೆಂದ್ರೇ ಇವತ್ತು ನಮಗೆ ಸ್ವಂತ ಉದ್ಯೋಗ, ಸ್ವಂತ ಮನೆ ಜೊತೆಗೆ ಆರೋಗ್ಯ ಭಾಗ್ಯ, ಸುಖಃ, ಸಂತೋಷ, ನೆಮ್ಮದಿ ಇದೆ ಅಂದ್ರೆ ಅದಕ್ಕೆಲ್ಲಾ ಕಾರಣ ಶ್ರೀಶ್ರೀ ಬಿ.ಹೆಚ್.ಆಚಾರ್ಯ ಗುರೂಜಿಯವ್ರು. ನಾವು ಸುಮಾರು 10 ವರ್ಷದಿಂದ ಸ್ವಂತದ್ದಾಗಿ 3–4 ಬಿಸ್‌ನೆಸ್ ಮಾಡಿದ್ರೂ ಯಾವ ಬಿಸ್‌ನೆಸ್ ಕೂಡ ಕೈ ಹಿಡಿಯಲಿಲ್ಲ ಎಷ್ಟೇ ಪ್ರಯತ್ನ ಪಟ್ರೂ ಬಿಸ್‌ನೆಸ್‌ಲ್ಲಿ ಇಂಪ್ರೂವ್‌ಮೆಂಟ್ ಆಗದೇ ಸಿಕ್ಕಾಪಟ್ಟೆ ಸಾಲ ಮಾಡ್ಕೊಂಡು ಬಿಟ್ಟಿದ್ವಿ ತುಂಬಾ ಅಂದ್ರೆ ತುಂಬಾ ಕಷ್ಟ ಅನುಭವಿಸಿದ್ದೀವಿ, ಒಂದು ಹೊತ್ತಿನ ಊಟಕ್ಕೂ ಕೂಡಾ ನಮ್ಮಲ್ಲಿ ಹಣ ಇರ್ತಿರ್ಲಿಲ್ಲಾ ಎಷ್ಟೋ ಸಾರಿ ಈ ಜೀವವೇ ಬೇಡಾ ಅಂತಾ ಸಾಯೋಕೆ ಕೂಡಾ ಹೋಗಿದ್ವಿ ಆದರೇ ಮಕ್ಕಳ ಮುಖ ನೋಡ್ಕೊಂಡು ಹೇಗೋ ಜೀವನ ಸಾಗಿಸ್ತಾ ಇದ್ವಿ. ಅಂತಹ ಕಷ್ಟಕರ ಸಮಯದಲ್ಲಿ ನಮಗೆ ದೇವರ ಹಾಗೆ ಕೈಹಿಡಿದು ಕಾಪಾಡಿದವ್ರೂ ಅಂದ್ರೆ ಶ್ರೀಶ್ರೀ ಬಿ.ಹೆಚ್.ಆಚಾರ್ಯ ಗುರೂಜಿಯವ್ರು. ನಾವೊಂದ್ಸಲ ಶ್ರೀ ಅಷ್ಟಲಕ್ಷ್ಮೀ ಜ್ಯೋತಿಷ್ಯ ಮಂದಿರ ಶ್ರೀಶ್ರೀ ಬಿ.ಹೆಚ್.ಆಚಾರ್ಯ ಗುರೂಜಿಯವರನ್ನು ಭೇಟಿ ಮಾಡಿದ್ವಿ ನಮ್ಮ ಎಲ್ಲಾ ಕಷ್ಟಕಾರ್ಪಣ್ಯಗಳನ್ನು ಅರ್ಥೈಸಿಕೊಂಡ ಗುರೂಜಿಯವ್ರು ನಮಗೆ ಪರಿಹಾರ ತಿಳಿಸಿದ್ರು ಎಷ್ಟೇ ಕಷ್ಟ ಆದ್ರೂ ಚಿಂತೆಯಿಲ್ಲ ಅಂತಾ ಹೇಳಿ ಗುರೂಜಿವ್ರೂ ಹೇಳಿದ ಪರಿಹಾರ ಮಾಡಿಕೊಂಡು ಬಂದ್ವಿ ನಂತರ ಕೆಲವೇ ದಿನಗಳಲ್ಲಿಯೇ ನಮ್ಮ ಎಲ್ಲಾ ಸಮಸ್ಯೆಗಳು ಶಾಶ್ವತ ಪರಿಹಾರ ಆಯ್ತು ಈಗ ನಾವೇ 2 ಬಿಸ್‌ನೆಸ್ ಮಾಡ್ತಾ ಇದ್ದೀವಿ. ಬಿಸ್‌ನೆಸ್ ತುಂಬಾ ಇಂಪ್ರೂವ್‌ಮೆಂಟ್ ಇದೇ. ಸಾಲ ಎಲ್ಲಾ ತೀರಿತು, ನಾವೇ ಒಂದಿಷ್ಟು ಜನಕ್ಕೆ ಕೆಲಸ ಕೂಡಾ ಕೊಟ್ಟಿದ್ವಿ. ಈಗ ನಮಗೆ ಯಾವ ಸಮಸ್ಯೆಗಳಿಲ್ಲದೇ ನೆಮ್ಮದಿಯಾಗಿ ಇದ್ದೀವಿ ಇಂಥಾ ನೆಮ್ಮದಿಯ ಬದುಕನ್ನು ಕಲ್ಪಿಸಿಕೊಟ್ಟಂತಹ ಶ್ರೀಶ್ರೀ ಆಚಾರ್ಯ ಗುರೂಜಿಯವರಿಗೆ ನಾವೂ ಯಾವಾಗಲೂ ಚಿರಋಣಿಯಾಗಿರ್ತೀವಿ. ನಿಮಗೂ ಕೂಡಾ ಯಾವುದೇ ಕಷ್ಟಕರವಾದ ಸಮಸ್ಯೆಗಳಿದ್ರೂ ನೇರವಾಗಿ ಗುರೂಜಿಯವರನ್ನು ಭೇಟಿ ಮಾಡಿ ನಿಮ್ಮೆಲ್ಲಾ ಸಮಸ್ಯೆಗಳಿಗೂ ಶಾಶ್ವತ ಪರಿಹಾರ ಪಡ್ಕೊಂಡು ನಮ್ಮ ಹಾಗೆ ನೀವೂ ಕೂಡಾ ನೆಮ್ಮದಿಯಾಗಿ ಜೀವನ ಮಾಡ್ತೀರಾ ಅಂತ ನಂಬಿಕೆಯಿಂದ ಹೇಳ್ತಾ ಇದ್ದೇವೆ.

ಗುರೂಜಿಯವರ ಮನೆ ವಿಳಾಸ # 1191, ಶ್ರೀ ಅಷ್ಟಲಕ್ಷ್ಮೀ ಜ್ಯೋತಿಷ್ಯ ಮಂದಿರ ಜಯನಗರ 9ನೇ ಬ್ಲಾಕ್, ರಾಗಿಗುಡ್ಡ ಬಸ್‌ಸ್ಟಾಪ್ ಆರ್ಚ್ ಎದುರುಗಡೆ ಮಾರ್ಕೆಟ್ ರೋಡ್, ರಾಘವೇಂದ್ರ ಉಪಹಾರ ಎದುರುಗಡೆ, ಅಪೋಲೊ ಫಾರ್ಮಸಿ ಮೇಲೆ, ಬೆಂಗಳೂರು

9880445522, 8884889444